# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1196 |
| ಸದಸ್ಯರ ಹೆಸರು | : | ಶ್ರೀ ಎನ್.ಅಪ್ಪಾಜಿಗೌಡ |
| ಉತ್ತರಿಸುವ ದಿನಾಂಕ | : | 20.12.2018 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು. |

<table>
<tr><th>ಕ್ರಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯಾದ್ಯಾಂತ ಎಷ್ಟು ಬಾಲಭವನ ಕೇಂದ್ರಗಳಿವೆ; (ತಾಲ್ಲೂಕು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಒಟ್ಟು 30 ಜಿಲ್ಲೆಗಳಲ್ಲಿ ಹಾಗೂ 182 ತಾಲ್ಲೂಕುಗಳಲ್ಲಿ ಬಾಲ ಭವನದ ಚಟುವಟಿಕೆಗಳು ನಡೆಯುತ್ತವೆ.</td></tr>
<tr><td>ಆ</td><td>ಬಾಲಭವನಗಳು ಪ್ರಸ್ತುತ ಎಷ್ಟು ಸ್ವಂತ: ಕಟ್ಟಡಗಳಲ್ಲಿ ನಡೆಯುತ್ತಿವೆ ಮತ್ತು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ಬಾಲ ಭವನಗಳ ಸಂಖ್ಯೆ ಎಷ್ಟು; (ತಾಲ್ಲೂಕು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಸ್ವಂತ ಕಟ್ಟಡ ಹೊಂದಿರುವ ಬಾಲ ಭವನ ಕೇಂದ್ರಗಳು ಈ ಕೆಳಕಂಡತಿವೆ.
<table>
<tr><th colspan="4">ಜಿಲ್ಲಾ ಕೇಂದ್ರಗಳು</th></tr>
<tr><th>ಕ್ರ.ಸಂ</th><th></th><th>ಕ್ರ.ಸಂ</th><th></th></tr>
<tr><td>1</td><td>ಬೆಂಗಳೂರು (ನಗರ)</td><td>11</td><td>ದಾವಣಗೆರೆ</td></tr>
<tr><td>2</td><td>ಬಾಗಲಕೋಟೆ</td><td>12</td><td>ದಕ್ಷಿಣ ಕನ್ನಡ</td></tr>
<tr><td>3</td><td>ಬಿಜಾಪುರ</td><td>13</td><td>ಕಲಬುರಗಿ(ನಗರ)</td></tr>
<tr><td>4</td><td>ಬೆಳಗಾವಿ(ನಗರ)</td><td>14</td><td>ಹಾವೇರಿ</td></tr>
<tr><td>5</td><td>ಬೀದರ್</td><td>15</td><td>ತುಮಕೂರು</td></tr>
<tr><td>6</td><td>ಚಿಕ್ಕಮಗಳೂರು</td><td>16</td><td>ಉಡುಪಿ</td></tr>
<tr><td>7</td><td>ಚಿತ್ರದುರ್ಗ</td><td>17</td><td>ಯಾದಗಿರಿ</td></tr>
<tr><td>8</td><td>ಧಾರವಾಡ</td><td>18</td><td>ಉತ್ತರ ಕನ್ನಡ</td></tr>
<tr><td>9</td><td>ಚಾಮರಾಜನಗರ</td><td>19</td><td>ಮೈಸೂರು</td></tr>
<tr><td>10</td><td>ಮಂಡ್ಯ</td><td></td><td>--</td></tr>
<tr><th colspan="4">ತಾಲ್ಲೂಕು ಕೇಂದ್ರಗಳು</th></tr>
<tr><th>ಕ್ರ.ಸಂ</th><th></th><th>ಕ್ರ.ಸಂ</th><th></th></tr>
<tr><td>1</td><td>ಮೂಡಿಗೆರೆ</td><td>7</td><td>ಮುಂಡರಗಿ</td></tr>
<tr><td>2</td><td>ಕೊಪ್ಪ</td><td>8</td><td>ಗುಂಡ್ಲುಪೇಟೆ</td></tr>
<tr><td>3</td><td>ಕಡೂರು</td><td>9</td><td>ದೇವದುರ್ಗ</td></tr>
<tr><td>4</td><td>ಕೂಡ್ಲಿಗಿ</td><td>10</td><td>ಕನಕಪುರ</td></tr>
<tr><td>5</td><td>ಹೂವಿನಹಡಗಲಿ</td><td>11</td><td>ಮಳವಳ್ಳಿ</td></tr>
<tr><td>6</td><td>ಅಥಣಿ</td><td></td><td>--</td></tr>
</table>
ಸ್ವಂತ ಕಟ್ಟಡ ಹೊಂದಿಲ್ಲದ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯ ಕಾರ್ಯದರ್ಶಿರವರ (ಉಪ ನಿರ್ದೇಶಕರು ಮಮಅ ಇಲಾಖೆ) ಕಛೇರಿಯಲ್ಲಿ ಹಾಗೂ ಸಂಬಂಧಿಸಿದ ಆಯಾ ತಾಲ್ಲೂಕಿನ ಕಾರ್ಯದರ್ಶಿರವರ(ಸಿ.ಡಿ.ಪಿ.ಓ)ಕಛೇರಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಬಾಲ ಭವನದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.</td></tr>
</table>

| | | |
|---|---|---|
| ಇ | ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಬಾಲಭವನಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ಮುಚ್ಚಿರುವ ಸರ್ಕಾರಿ ಶಾಲೆಗಳ ಕಟ್ಟಡಗಳನ್ನು ಬಳಸಿಕೊಳ್ಳುವ ಉದ್ದೇಶ ಸರ್ಕಾರದ ಮುಂದಿದೆಯೇ; | ಬಾಡಿಗೆ ಕಟ್ಟಡಗಳಲ್ಲಿ ಬಾಲ ಭವನದ ಚಟುವಟಿಕೆಗಳು ನಡೆಯುತ್ತಿರುವುದಿಲ್ಲ. ಮುಚ್ಚಿರುವ ಸರ್ಕಾರಿ ಶಾಲಾ ಕಟ್ಟಡಗಳನ್ನು ಬಾಲಭವನದ ಚಟುವಟಿಕೆಗಳಿಗಾಗಿ ಬಳಸುವ ಪ್ರಸ್ತಾವನೆ ಸಧ್ಯಕ್ಕೆ ಇರುವುದಿಲ್ಲ. |
| ಈ | ಬಾಲ ಭವನ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಖಾಯಂ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ತಾಲ್ಲೂಕು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು) | ಬೆಂಗಳೂರಿನ ಕೇಂದ್ರ ಬಾಲ ಭವನದಲ್ಲಿ 36 ಖಾಯಂ ಸಿಬ್ಬಂದಿಗಳು ಹಾಗೂ 7 ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ರಾಜ್ಯದ ಎಲ್ಲಾ ಜಿಲ್ಲಾ ಬಾಲ ಭವನಗಳಲ್ಲಿ ಪ್ರತಿ ಜಿಲ್ಲೆಗೆ ಒಬ್ಬರು ಕಾರ್ಯಕ್ರಮ ಸಂಯೋಜಕರು ಹಾಗೂ ಒಬ್ಬ ಕಛೇರಿ ಸಹಾಯಕರನ್ನು ಬಾಲ ಭವನದ ಯೋಜನೆ ಅನುಷ್ಠಾನಗೊಳಿಸಲು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ತಿಳಿಸಲಾಗಿರುತ್ತದೆ. ಈವರೆವಿಗೂ ಬೆಂಗಳೂರು(ಗ್ರಾ); ಬಿಜಾಪುರ; ಬೆಳಗಾವಿ(ನಗರ); ಬೀದರ್; ಚಿತ್ರದುರ್ಗ; ಚಿಕ್ಕಬಳ್ಳಾಪುರ :ಧಾರವಾಡ; ದಕ್ಷಿಣ ಕನ್ನಡ; ಹಾವೇರಿ; ಮಂಡ್ಯ; ಗದಗ : ಹಾಸನ; ತುಮಕೂರು ; ಉಡುಪಿ; ಯಾದಗಿರಿ: ಕೊಡಗು: ಕೊಪ್ಪಳ: ರಾಮನಗರ: ಮತ್ತು ಶಿವಮೊಗ್ಗ ಜಿಲ್ಲೆ ಹೀಗೆ ಒಟ್ಟು 19 ಜಿಲ್ಲೆಗಳಲ್ಲಿ ನೇಮಕಗಳನ್ನು ಮಾಡಲಾಗಿರುತ್ತದೆ.<br><br>ಉಳಿದ 11 ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ತಾಲ್ಲೂಕು ಬಾಲ ಭವನ ಕೇಂದ್ರಗಳಲ್ಲಿ ಯಾವುದೇ ಸಿಬ್ಬಂದಿ ಇರುವುದಿಲ್ಲ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿನ ಸಿಬ್ಬಂದಿಗಳಿಗೆ ಹೆಚ್ಚುವರಿ ಕಾರ್ಯಭಾರ ವಹಿಸಲಾಗಿರುತ್ತದೆ. |

**ಸಂಖ್ಯೆ: ಮಮಇ 62 ರಾಮಅ 2018**

(ಡಾ॥ ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು